ಶ್ರೀ ಎಂ. ಎನ್. ರಾಮಣ್ಣ.—ನಿನ್ನೆಯ ದಿವಸ ಪ್ರಶ್ನೋತ್ತರಕಾಲದಲ್ಲಿ ಚಾಮರಾಜನಗರ–ಸತ್ಯಮಂಗಲ ರೈಲುಮಾರ್ಗವನ್ನು 90 ವರ್ಷಗಳ ಹಿಂದೆಯೇ ಪ್ರೈವೇಟಾರಿಟಿ ಕೊಟ್ಟು ಮಾಡ ಬೇಕೆಂದಿದ್ದರು ಎಂಬುದಾಗಿ ಹೇಳಿದರು. ಇದನ್ನು ಮಾಡುವುದರಿಂದ ನಮ್ಮ ಪ್ರಾಂತದ ಜನಗಳಿಗೆ ಅನುಕೂಲವಾಗುತ್ತದಲ್ಲವೆ ?

ಶ್ರೀ ಕೆ. ಲಕ್ಕಪ್ಪ.—ಅಜಿಟೇಷನ್ 1891 ರಿಂದಲೂ ಇತ್ತು. ಈ ರೈಲ್ವೆ ಲೈನಿಗೆ ಪ್ರೈವೇಟಾರಿಟಿ ಕೊಡುವುದು ನೂಕ್ತವೆಂದು ಎಲ್ಲರೂ ಮನಗಂಡು ಆ ರೀತಿಯಾಗಿ ಇದನ್ನು ಪ್ರೈವೇಟಾರಿಟಿ ಲಿಸ್ಟ್‌ನಲ್ಲಿ ಸೇರಿಸುವಂತೆ ಏರ್ಪಾಡುಮಾಡಿದ್ದೇವೆ.

ಶ್ರೀ ಡಿ. ಎಸ್. ನಾಡಕರ್ಣಿ.—ಕಾರವಾರ ಬಂದರಿನಿಂದ ಹುಬ್ಬಳ್ಳಿಯವರೆಗೆ ಇರತಕ್ಕ ರೈಲ್ವೆ ಯಾವ್ಯಾವ ಊರುಗಳಿಂದ ಹಾದುಹೋಗುತ್ತದೆ ? ಹಿಂದಿನ ಸಾರಿ ಸರ್ವೆಮಾಡಿದ್ದರು ಎಂಬುದಾಗಿ ಹೇಳಿದ್ದಾರೆ, ಆದ್ದರಿಂದ ಇದನ್ನು ಯಾವ ರೀತಿ ಪ್ರಪೋಸ್ ಮಾಡಿದ್ದೀರಾ ?

Sri K. LAKKAPPA.—I want notice since there are no details available.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಬೆಂಗಳೂರು–ಮೈಸೂರು ರೈಲ್ವೆ ಲೈನನ್ನು ಎರೆಕ್ಟಿಕ್ ಟ್ರೈನ್ ಆಗಿ ಮಾಡಬೇಕೆಂದು ಸರ್ ವಿಜಾರ್ಜ್ ಸಾಹೇಬರ ಕಾಲದಿಂದಲೂ ಇತ್ತು. ಅದಕ್ಕೋಸ್ಕರ ಒಂದು ಸರ್ವೆ ರಿಪೋರ್ಟ್ ಸಹ ಇಟ್ಟುಕೊಂಡಿದ್ದೀರಿ. ಅಂದಮೇಲೆ ಅದನ್ನು ಎಷ್ಟು ದೂರ ಮಾಡ ಬೇಕೆಂದಿದ್ದೀರಿ ?

ಶ್ರೀ ಕೆ. ಲಕ್ಕಪ್ಪ.—ಸದ್ಯಕ್ಕೆ ಅದಕ್ಕೆ ಪ್ರಾಧಾನ್ಯತೆ ಸಿಕ್ಕಿದ ಹಾಗೆ ಕಾಣಲಿಲ್ಲ. ಬೆಂಗಳೂರು–ಮೈಸೂರು ಮಧ್ಯೆ ಎರೆಕ್ಟ್ರಿಕ್ ಬಸ್ ಓಡಿಸುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಆರ್. ಪಾಟೀರ್.—1962ರಿಂದ ಇದುವರೆಗೆ ಈ ಮಧ್ಯೆ ಇದರ ಬಗ್ಗೆ ಈ ಸರ್ಕಾರ ಮಾಡಿದ ಪ್ರಯತ್ನಗಳು ಏನು ? ರೈಲ್ವೆ ಲೈನನ್ನು ಬ್ರಾಡ್‌ಗೇಜ್ ಮಾಡುವುದರಲ್ಲಿ ಸರ್ಕಾರದವರು ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದಾರೆ ?

ಶ್ರೀ ಕೆ. ಲಕ್ಕಪ್ಪ.—ಅನೇಕ ರೈಲ್ವೆ ಮಾರ್ಗಗಳನ್ನು ಸರ್ವೆ ಮಾಡುವುದಕ್ಕೆ ಪ್ರಯತ್ನ ಮಾಡಿ ದ್ದೇವೆ. ಹುಬ್ಬಳ್ಳಿ—ಕಾರವಾರ ಲೈನ್, ಮತ್ತು ತಾಳಗುಪ್ಪ—ಹೊನ್ನಾವರ ಲೈನ್‌ಗಳ ಬಗ್ಗೆ ಸರ್ವೆ ನಡೆಸುತ್ತಿದ್ದೇವೆಂದು ಹೇಳಿದ್ದೇವೆ.

Hanumanahalla Project

309. Sri M. MALLAPPA (Birur).—

Will the Chief Minister be pleased to state :—

(*a*) whether the public of Chickmagalur District are urging to take up Hanumanahalla Project for irrigation purpose in Chickmagalur and Kadur Taluks;

(*b*) whether the Government has taken up the investigation of the said project ?

(*c*) the estimated cost of the said project ?

Sri D. PARAMESWARAPPA (Deputy Minister for Major Irrigation).—

(*a*) Yes.

(*b*) Yes.

(*c*) The Scheme is under investigation.

ಶ್ರೀ ಎಂ. ಮಲ್ಲಪ್ಪ.—(ಸಿ) ಪ್ರಶ್ನೆಗೆ ಉತ್ತರವಾಗಿ ಈ ಯೋಜನೆಯನ್ನು ಪರಿಶೀಲನೆಯಲ್ಲಾಗುತ್ತಿದೆಯೆಂದು ಹೇಳಿದ್ದೀರಿ. ಇದರ ಬಗ್ಗೆ ಅಂದಾಜು ತಯಾರಾಗುವುದಕ್ಕೆ ಇನ್ನೆಷ್ಟು ಕಾಲ ಬೇಕು, ಅದನ್ನು ಕಾರ್ಯಗತ ಮಾಡುವುದು ಯಾವಾಗ ?

Sri D. PARAMESWARAPPA.—Preliminary surveys have been conducted by the Executive Engineer, Major Irrigation Investigation Division, Hassan. We cannot give the estimated cost of the project because it is not finally investigated. According to the preliminary investigation, the approximate cost will be Rs. 40 lakhs.

ಶ್ರೀ ಹಂಜಿ ಶಿವಣ್ಣ.—ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಉತ್ತರ ಹೇಳಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ ಅವರಿಗೆ ಕನ್ನಡ ಚೆನ್ನಾಗಿ ಬರುತ್ತದೆ.

ಶ್ರೀ ಎಂ. ಮಲ್ಲಪ್ಪ.—ಅಂದಾಜು 40 ಲಕ್ಷವೆಂದು ಹೇಳಿದ್ದೀರಿ. ಮಾನ್ಯ ಶ್ರೀ ರಾಜಶೇಖರ ಮೂರ್ತಿಯವರು ಚಿಕ್ಕಮಗಳೂರಿಗೆ ಬಂದಾಗ್ಗೆ ಅಲ್ಲಿನ ಅಭಾವ ಪರಿಹಾರ ಕಾಮಗಾರಿಗಳಿಗಾಗಿ 50 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು. ಅವರು ಕೊಟ್ಟ ಭರವಸೆ ಪ್ರಕಾರ 4ನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ಈ ಕಾಮಗಾರಿಯನ್ನು ಸೇರಿಸಿ ಜಾಗ್ರತೆ ಕೆಲಸಮಾಡಿಸಿಕೊಡುತ್ತೀರಾ ?

ಶ್ರೀ ಹಂಜಿ ಶಿವಣ್ಣ.—ಮಂತ್ರಿಗಳು ಕನ್ನಡದಲ್ಲಿ ಮಾತನಾಡಬೇಕು.

ಶ್ರೀ ಪಾಟೀಳ್ ನಾಗರಾಜ್.—ಮಾನ್ಯ ಸದಸ್ಯರು ಹೇಳಿದ್ದು ಸರಿ. ಅವರಿಗೆ ಕನ್ನಡ ಬರುವುದಿಲ್ಲವೆಂದು ಹೇಳಿದರೆ ನಾನು ಒಪ್ಪುವುದಿಲ್ಲ. ಉತ್ತರವನ್ನು ಕನ್ನಡದಲ್ಲಿಯೇ ಹೇಳಲಿ.

Sri D. PARAMESWARAPPA.—That is why I said in the beginning itself that it is not possible to give the precise cost of the project since it is not finally investigated. It may be Rs. 50 lakhs or more than Rs. 50 lakhs after it is finally investigated. I do not know whether the Hon. Minister for Industries has given any assurance. If he has given an assurance, it will be kept up.

Construction of Byalad Tank

326. Sri N. HUTCHMASTY GOWDA (Huliyurdurga).—

Will the Minister of State for Minor Irrigation be pleased to state :-

(*a*) when the estimates about Byalad tank in Kunigal Taluka was prepared ;

(*b*) the officers and the Ministers, who went to inspect the two sites for this tank ;

(*c*) whether construction work of this tank has been included in the present year's programme list ;

(*d*) whether it is a fact that the Deputy Minister for Sericulture is raising an objection even though the concerned Minister of State has decided taking up this work during this year only as per the opinion of Chief Engineer.

(*e*) At what stage the matter stands at present ?